ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಅ1/ಆಡಳಿತ/ಪ್ರಾಶಾಶಿ/ಬಡ್ತಿ/68/2019-20 ದಿನಾಂಕ:16-03-2020

## *ಅಧಿಸೂಚನೆ*

ವಿಷಯ:-ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ***ಉರ್ದು ಮಾಧ್ಯಮ*** ವೃಂದದ ಶಿಕ್ಷಕರ ದಿನಾಂಕ:01-01-2020 ರಲ್ಲಿದ್ದಂತೆ ಮೇರಿಟ್ ಆಧಾರದ ಮೇರೆಗೆ ಪರಿಷ್ಕೃತ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:-1)ಕರ್ನಾಟಕ ಸರ್ಕಾರಿ ನೌಕರರ(ಜೇಷ್ಠತಾ)ನಿಯಮಗಳು 1957 ನಿಯಮ(5) ರಂತೆ.
2)ಸರ್ಕಾರಿ ಪತ್ರ ಸಂಖ್ಯೆ:ಇಡಿ 202 ಎಸ್‌ಎಲ್‌ಬಿ 2014 ದಿನಾಂಕ:20-05-2014.
3)ಸರ್ಕಾರಿ ಪತ್ರ ಸಂಖ್ಯೆ:ಇಡಿ 152 ಎಲ್‌ಬಿಪಿ 2014 ದಿನಾಂಕ:20-05-2014.
4)ಸರ್ಕಾರದ ಪತ್ರ ಸಂಖ್ಯೆ:ಡಿ.ಪಿ.ಎ.ಆರ್186ಎಸ್.ಆರ್.ಎಸ್2018 ಬೆಂಗಳೂರು ದಿ:15-05-2019.
5)ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ:11-02-2020.
6)ಶಿಕ್ಷಕರು ಸಲ್ಲಿಸಿರುವ ಆಕ್ಷೇಪಣೆಗಳು.
7)ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ:07-03-2020.

- * * * * * -

ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಉರ್ದು ಮಾಧ್ಯಮ ವೃಂದದ ದಿನಾಂಕ:01-01-2020 ರಲ್ಲಿದ್ದಂತೆ ಮೇರಿಟ್ ಆಧಾರದ ಮೇರೆಗೆ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಮೂಲ ವೃಂದ, ಸ್ಥಳಿಯ ವೃಂದ ಹಾಗೂ ಉಳಿದ ಮೂಲ ವೃಂದದ ಪ್ರತ್ಯೇಕವಾದ ಪಟ್ಟಿಯನ್ನು ದಿನಾಂಕ:07-03-2020 ರಂದು ಈ ಕಾರ್ಯಾಲಯದ ವೆಬ್‌ಸೈಟ್ (www.ddpikalaburagi.in)ದಲ್ಲಿ ಪ್ರಕಟಿಸಲಾಗಿದೆ.

ಮುಂದುವರೆದು ಸದರಿ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಕೇಲವು ಶಿಕ್ಷಕರ ಮೇರಿಟ್ ಅಂಕಗಳು ಸದರಿ ಶಿಕ್ಷಕರ ಮೇರಿಟ್ ದಾಖಲಿಸಿ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಮೂಲ ವೃಂದ, ಸ್ಥಳಿಯ ವೃಂದ ಹಾಗೂ ಉಳಿದ ಮೂಲ ವೃಂದದ ಪ್ರತ್ಯೇಕವಾದ ಪರಿಷ್ಕೃತ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಅಂತಿಮಗೊಳಿಸಿ ಈ ಕಾರ್ಯಾಲಯದ ವೆಬ್‌ಸೈಟ್ (www.ddpikalaburagi.in)ದಲ್ಲಿ ಪ್ರಕಟಿಸಲಾಗಿದೆ.

1) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಶಿಕ್ಷಕರ ಸೇವಾ ಮಾಹಿತಿಯು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಒದಗಿಸಿರುವ ಮಾಹಿತಿಯನ್ನಾಧರಿಸಿ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದಂತೆ ಸಿದ್ಧಪಡಿಸಲಾಗಿದೆ.
2) ಕರ್ನಾಟಕ ಸರ್ಕಾರಿ ನೌಕರರ(ಜೇಷ್ಠತಾ) ನಿಯಮಗಳು 1957ರ ನಿಯಮ 6 ಪ್ಯಾರಾ 2ರ ಪ್ರಕಾರ ವರ್ಗಾವಣೆಯನ್ನು ನೌಕರರ ವಿನಂತಿಯ ಮೇರೆಗೆ ಮಾಡಿದ್ದಲ್ಲಿ ಆತನ ವರ್ಗಾವಣೆಯಾದ ವರ್ಗ ಅಥವಾ ಶ್ರೇಣಿಯ ಪಟ್ಟಿಯಲ್ಲಿ ಆತನನ್ನು ವರ್ಗಾವಣೆಯ ದಿನಾಂಕದಂದು ಅಥವಾ ಮುಂಚೆ ಆ ಸೇವೆಯ ವರ್ಗ ಅಥವಾ ಶ್ರೇಣಿಯನ್ನು ಹೊಂದಿದ ಎಲ್ಲಾ ನೌಕರರ ಕೆಳಗೆ ಅವನನ್ನು ಇಡತಕ್ಕದ್ದು ಎಂದು ಉದ್ಧರಿಸಿರುತ್ತದೆ. ಅದರಂತೆ ಕಲಬುರಗಿ ಜಿಲ್ಲೆಗೆ ವರ್ಗಾವಣೆಯಾಗಿ ಬಂದಿರುವ ಶಿಕ್ಷಕರಿಗೆ ಅರ್ಹತಾ ದಿನಾಂಕವನ್ನು ಆ ಬ್ಲಾಕದಲ್ಲಿ ಕೊನೆಯ ದಿನಾಂಕವನ್ನು ಅರ್ಹತಾ ದಿನಾಂಕವೆಂದು ಪರಿಗಣಿಸಿದೆ.
3) ಕರ್ನಾಟಕ ಸರ್ಕಾರಿ ನೌಕರರ(ಜೇಷ್ಠತಾ) ನಿಯಮಗಳು 1957ರ ನಿಯಮ 5ರ ಪ್ರಕಾರ ನೇಮಕಾತಿಯಲ್ಲಿ ಆಯ್ಕೆಯ ಮೂಲಕ ಮಾಡಿರುವಾಗ ಆಯಾ ನೇಮಕಾತಿ ಪ್ರಾಧಿಕಾರವು ಯಾವ ಆದೇಶದ ಮೂಲಕ ಅಭ್ಯರ್ಥಿಗಳ ಅರ್ಹತಾ ಕ್ರಮದಲ್ಲಿ ಇಡಲಾಗಿದೆಯೋ ಆ ಆದೇಶದ ಮೂಲಕ ಮಾಡಿರುವಾಗ ಆಯಾ ನೇಮಕಾತಿ ಪ್ರಾಧಿಕಾರವು ಯಾವ ಆದೇಶದ ಮೂಲಕ ಅಭ್ಯರ್ಥಿಗಳ ಅರ್ಹತಾ ಕ್ರಮದಲ್ಲಿ ಇಡಲಾಗಿದೆಯೋ ಆ ಆದೇಶದ ಮೂಲಕ ಅವರ ಜೇಷ್ಠತಾ ಕ್ರಮವನ್ನು ನಿರ್ಧರಿಸತಕ್ಕದ್ದು ಎಂದು ಉದ್ಧರಿಸಿರುತ್ತದೆ. ಪ್ರಯುಕ್ತ ನೇರ ನೇಮಕಾತಿ ಮೂಲಕ ನೇಮಕಗೊಂಡ ಶಿಕ್ಷಕರನ್ನು ಅವರ ನೇಮಕಾತಿ ಆಯ್ಕೆ ಪಟ್ಟಿ ಪ್ರಕಟಿಸಿದ ದಿನಾಂಕವನ್ನು ಅರ್ಹತಾ ದಿನಾಂಕವೆಂದು ಪರಿಗಣಿಸಿದೆ.
4) ಈ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ತರಹದ ದೋಷಗಳನ್ನು ಕಂಡು ಬಂದಲ್ಲಿ ಅದನ್ನು ಸರಿಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

17/3/2020

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ

ಗೆ,

1) ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2) ಈ ಕಛೇರಿಯ ಇ-ಗೌರ್ನರ್ಸಕ್ಕೆ ಕೊಡುತ್ತಾ ಈ ಕಾರ್ಯಾಲಯದಲ್ಲಿ ವೆಬ್‌ಸೈಟ್‌ದಲ್ಲಿ ಪ್ರಕಟಿಸಲು ತಿಳಿಸಿದೆ.

ಪ್ರತಿಯನ್ನು:-

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆಯ ಸಚಿವಾಲಯ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಆಯುಕ್ತರು ಬೆಂಗಳೂರು ಹಾಗೂ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
3) ಮಾನ್ಯ ನಿರ್ದೇಶಕರು ಅಪರ ಆಯುಕ್ತರ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
4) ಮಾನ್ಯ ಸಹ ನಿರ್ದೇಶಕರು(ಆಡಳಿತ) ಅಪರ ಆಯುಕ್ತರ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.